## ಎ.ಎಸ್. ಕಿರಣ್ ಕುಮಾರ್



ಭಾರತದ ಬಾಹ್ಯಾಕಾಶ ವಿಜ್ಞಾನಿ ಮತ್ತು ಇಸ್ರೋದ ಮುಖ್ಯಸ್ಥರಾಗಿ ನಿವೃತ್ತಿಯಾಗಿರುವ ಕಿರಣ್ ಕುಮಾರ್ ಅವರ ಪೂರ್ಣ ಹೆಸರು ಆಲೂರು ಸಿಲೀನ್ ಕಿರಣ್ ಕುಮಾರ್. ಜನಿಸಿದ್ದು ಹಾಸನ ಜಿಲ್ಲೆಯ ಆಲೂರಿನಲ್ಲಿ. ಬೆಂಗಳೂರಿನ ನ್ಯಾಷನಲ್ ಕಾಲೇಜ್ ವಿದ್ಯಾರ್ಥಿಯಾಗಿದ್ದ ಕಿರಣ್ ಕುಮಾರ್, ವಿಜ್ಞಾನದಲ್ಲಿ ಆನರ್ಸ್ ಪದವಿ ಸಂಪಾದಿಸಿ, ನಂತರ ಎಲೆಕ್ಟ್ರಾನಿಕ್ಸ್‌ನಲ್ಲಿ ಎಂ.ಎಸ್ಸಿ ಪದವಿ ಪಡೆದರು. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಫಿಸಿಕಲ್ ಎಂಜಿನಿಯರಿಂಗ್‌ನಲ್ಲಿ ಎಂ.ಟೆಕ್ ಪದವಿ ಗಳಿಸಿದರು.

'ಚಂದ್ರಯಾನ–1' ಮತ್ತು 'ಮಂಗಳಯಾನ'ದ ಬಾಹ್ಯಾಕಾಶ ನೌಕೆಗಳನ್ನು ರೂಪಿಸುವಲ್ಲಿ ಇವರ ಪಾತ್ರ ಹಿರಿದು. 'ಚಂದ್ರಯಾನ–2'ರ ನೌಕೆಯಲ್ಲಿ ಇರಿಸಲಾದ ಚಂದ್ರನ ಮೇಲ್ಮೈ ಮ್ಯಾಪಿಂಗ್ ಮಾಡುವ ಕ್ಯಾಮೆರಾ ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಇವರು 'ಕಾರ್ಟೋಸ್ಯಾಟ್' ಉಪಗ್ರಹಗಳ ನಿರ್ಮಾಣಕ್ಕೂ ರೂವಾರಿಯಾಗಿದ್ದಾರೆ. ಭಾರತದ ಪ್ರಥಮ ರಿಮೋಟ್ ಸೆನ್ಸಿಂಗ್ ಉಪಗ್ರಹ ಭಾಸ್ಕರದಲ್ಲಿ (1979) ಅಳವಡಿಸಲಾದ ಎಲೆಕ್ಟ್ರೊ ಆಪ್ಟಿಕಲ್ ಇಮೇಜ್ ಸೆನ್ಸರ್‌ಗಳನ್ನು ರೂಪಿಸಿದ ಕೀರ್ತಿ ಕಿರಣ್ ಕುಮಾರ್ ಮತ್ತು ಅವರ ತಂಡಕ್ಕೆ ಸಲ್ಲುತ್ತದೆ. ಇದರ ನಂತರವಷ್ಟೇ ನಮಗೆಲ್ಲ ಟೆಲಿವಿಷನ್‌ಗಳಲ್ಲಿ ಚಿತ್ರ ವೀಕ್ಷಿಸಲು ಸಾಧ್ಯವಾಯಿತು. ಇವರ ನಾಯಕತ್ವ ಮತ್ತು ಪ್ರತಿಭೆಯನ್ನು ಗುರುತಿಸಿದ ಫ್ರಾನ್ಸ್ ತನ್ನ ದೇಶದ ಅತ್ಯುನ್ನತ ನಾಗರಿಕ ಗೌರವವಾದ 'ಲಿಯನ್ ಡಿ ಹಾನ್ಯುರ್' ನೀಡಿ ಗೌರವಿಸಿದೆ. ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿದೆ.



ಬಾಯ್ಸ್ ಹೈಸ್ಕೂಲು, ಮದರಾಸಿನ ಕ್ರಿಶ್ಚಿಯನ್ ಕಾಲೇಜುಗಳಲ್ಲಿ ಆರಂಭಿಕ ಹಂತದ ವಿದ್ಯಾಭ್ಯಾಸ ಮುಗಿಸಿದ ಇವರು ಲಂಡನ್‌ನ ಕಿಂಗ್ಸ್ ಕಾಲೇಜಿನಲ್ಲಿ ಪದವಿ ಪಡೆದರು. ಪರಮಾಣು ವಿಜ್ಞಾನಿ ಎಂದೇ ಖ್ಯಾತರಾಗಿದ್ದ ರಾಮಣ್ಣ, ಭಾರತದ ಪರಮಾಣು ವಿದ್ಯುತ್ ತಯಾರಿಕೆ, ಪರಮಾಣು ಬಾಂಬ್ ತಯಾರಿಕೆಯ ಕೆಲಸಗಳಲ್ಲಿ ಮುಂಚೂಣಿ ಪಾತ್ರ ವಹಿಸಿದ್ದರು. 60–70ರ ದಶಕದಲ್ಲಿ ದೇಶದ ಪರಮಾಣು ಯೋಜನೆಯ ನೇತೃತ್ವ ವಹಿಸಿದ್ದ ಅವರು ದೇಶದ ಮೊಟ್ಟ ಮೊದಲ ಅಣು ರಿಯಾಕ್ಟರ್ 'ಅಪ್ಸರ' ಕಾರ್ಯಾರಂಭ ಮಾಡಲು ನೀಡಿದ ಕೊಡುಗೆ ಅಪಾರ. ನಮ್ಮ ರಾಜ್ಯದ ಕೈಗಾ ಅಣುಸ್ಥಾವರದ ಸ್ಥಾಪನೆ ರಾಮಣ್ಣನವರ ಕೊಡುಗೆಯೇ.

ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅಭಿಲಾಷೆಯಂತೆ ಶಸ್ತ್ರಾಸ್ತ್ರ ಕ್ಷಮತೆಯ ಪ್ಲುಟೋನಿಯಂ ಉತ್ಪಾದನೆಯ 'ಪ್ರಾಜೆಕ್ಟ್ ಫೀನಿಕ್ಸ್' ಪ್ರಾರಂಭಿಸಿ ಸೈ ಎನಿಸಿಕೊಂಡಿದ್ದರು. 1978ರಲ್ಲಿ ಇರಾಕಿಗೆ ಭೇಟಿ ನೀಡಿದಾಗ ಇರಾಕ್ ಅಧ್ಯಕ್ಷ ಸದ್ದಾಂ ಹುಸೇನ್, ರಾಮಣ್ಣನವರನ್ನು ಭೇಟಿ ಮಾಡಿ ಅಣು ಬಾಂಬ್ ತಯಾರಿಸಲು ತಮ್ಮ ದೇಶಕ್ಕೆ ನೆರವಾಗಿ ಎಂದು ಕೇಳಿಕೊಂಡಿದ್ದರು. ಆ ಕೋರಿಕೆಯನ್ನು ರಾಜಾ ರಾಮಣ್ಣ ತಿರಸ್ಕರಿಸಿದ್ದರು.

ಆರನೆಯ ವಯಸ್ಸಿನಲ್ಲಿ ಪಿಯಾನೊ ನುಡಿಸುವುದನ್ನು ಕಲಿತಿದ್ದ ಅವರು, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮ್ಮುಖದಲ್ಲಿ ವಾದ್ಯ ನುಡಿಸಿ ಮೆಚ್ಚುಗೆ ಗಳಿಸಿದ್ದರು. ಕ್ಷಿಪಣಿ ತಜ್ಞ ಡಾ. ಅಬ್ದುಲ್ ಕಲಾಂ ಅವರಿಗೆ ಮಾರ್ಗದರ್ಶಕರಾಗಿದ್ದ ರಾಮಣ್ಣ – ಬಾಬಾ ಆಟಾಮಿಕ್ ರಿಸರ್ಚ್ ಸೆಂಟರ್, ಡಿಆರ್‌ಡಿಒ, ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಗಳ ಮುಖ್ಯಸ್ಥರಾಗಿದ್ದರು. 'ಇಯರ್ಸ್ ಆಫ್ ಪಿಲಿಗ್ರಿಮೇಜ್' ಅವರ ಆತ್ಮಕಥೆ. ಸಂಗೀತದ ಕುರಿತಾದ 'ಸ್ಟ್ರಕ್ಚರ್ ಆಫ್ ಮ್ಯೂಸಿಕ್ ಇನ್ ರಾಗ' ಪುಸ್ತಕ ರಚಿಸಿದ್ದಾರೆ. ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಲಯದ ರಾಜ್ಯ ಸಚಿವರಾಗಿದ್ದ ರಾಜಾ ರಾಮಣ್ಣ ಪ್ರಧಾನಿ ಇಂದಿರಾಗಾಂಧಿ, ವಿ.ಪಿ. ಸಿಂಗ್ ಅವರಿಗೆ ವೈಜ್ಞಾನಿಕ ಸಲಹೆಗಾರರಾಗಿದ್ದರು. ಪರಮಾಣು ವಿಜ್ಞಾನ ಕ್ಷೇತ್ರದಲ್ಲಿ ಭಾರತಕ್ಕೆ ದೊಡ್ಡ ಹೆಸರು ತಂದುಕೊಟ್ಟಿದ್ದ ರಾಜಾ ರಾಮಣ್ಣನವರಿಗೆ ಭಾರತ ಸರ್ಕಾರವು ಪದ್ಮಭೂಷಣ, ಪದ್ಮವಿಭೂಷಣ ಮತ್ತು ಪದ್ಮಶ್ರೀ ಗೌರವಗಳನ್ನು ನೀಡಿ ಸನ್ಮಾನಿಸಿತು. ಶಾಂತಿ ಸ್ವರೂಪ್ ಭಟ್ನಾಗರ್ ಬಹುಮಾನ, ಮೇಘನಾದ ಸಹ ಮೆಡಲ್, ಆರ್.ಡಿ. ಬಿರ್ಲಾ ಮೆಮೋರಿಯಲ್ ಪ್ರಶಸ್ತಿಗಳು ರಾಮಣ್ಣನವರಿಗೆ ಸಂದಿವೆ.

## ವಿಶ್ವೇಶ್ವರಯ್ಯ ಪ್ರಕಾಶ್

'ಸ್ಟ್ರಕ್ಚರಲ್ ಬಯಾಲಜಿಸ್ಟ್' (ಜೀವರಚನಾ ವಿಜ್ಞಾನಿ) ಎಂದೇ ಖ್ಯಾತರಾಗಿರುವ ವಿಶ್ವೇಶ್ವರಯ್ಯ ಪ್ರಕಾಶ್ ಅವರದು ಆಹಾರ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದ ದೊಡ್ಡ ಹೆಸರು. ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಇವರು ಮಾಡಿದ ಸೇವೆ ಅನನ್ಯವಾದದು. ಮೈಸೂರು ವಿಶ್ವವಿದ್ಯಾಲಯದಿಂದ ಪದವಿ, ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಸಂಪಾದಿಸಿ, 1980ರಲ್ಲಿ ಟೆಕ್ಸಾಸ್ ವಿಶ್ವವಿದ್ಯಾಲಯದ ಫೆಲೋಶಿಪ್ ಪಡೆದು, ಅಲ್ಲಿನ ಮೆಡಿಕಲ್ ಸೆಂಟರ್‌ನಲ್ಲಿ ಉನ್ನತ ಅಧ್ಯಯನ ನಡೆಸಿದರು. ಮರುವರ್ಷ ಭಾರತಕ್ಕೆ ಮರಳಿ ಸಿಎಸ್‌ಐಆರ್‌ನ ಮೈಸೂರು ಘಟಕದಲ್ಲಿ ಪೂಲ್ ಆಫೀಸರ್ ಆಗಿ ಕೆಲಸ ಮಾಡಿದರು. ನಂತರ ಅದೇ ಸಂಸ್ಥೆಯನ್ನು 13 ವರ್ಷಗಳ ಕಾಲ ನಿರ್ದೇಶಕರಾಗಿ ಮುನ್ನಡೆಸಿದರು. 2006ರಲ್ಲಿ (ಸಿಎಸ್‌ಐಆರ್) ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ನಿರ್ದೇಶಕರನ್ನಾಗಿ ವಿಶ್ವೇಶ್ವರಯ್ಯ ಪ್ರಕಾಶ್ ಅವರನ್ನು ನೇಮಿಸಲಾಯಿತು.

ಸ್ಟ್ರಕ್ಚರಲ್ ಹೋಮಾಲಜಿ ಮತ್ತು ಬೀಜ ಪ್ರೊಟೀನ್‌ಗಳ ಕುರಿತು ವಿಸ್ತೃತ ಅಧ್ಯಯನ ಮಾಡಿರುವ ಪ್ರಕಾಶ್, 200ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧ ಬರೆದಿದ್ದಾರೆ ಮತ್ತು 50ಕ್ಕೂ ಹೆಚ್ಚು ಪೇಟೆಂಟ್ (ಹಕ್ಕುಸ್ವಾಮ್ಯ) ಸಂಪಾದಿಸಿದ್ದಾರೆ. ಕಬ್ಬಿನ ರಸ, ಎಳನೀರು ಮತ್ತು ಬೇಕರಿ ತಿನಿಸುಗಳನ್ನು ಕೆಡದಂತೆ ಶೇಖರಿಸಿ ಇಡಲಾಗುವ ತಂತ್ರಜ್ಞಾನಕ್ಕಾಗಿ ಪೇಟೆಂಟ್ ಪಡೆದಿದ್ದಾರೆ. 2004ರಲ್ಲಿ ಸುನಾಮಿಯಿಂದ ತೊಂದರೆಗೊಳಗಾಗಿದ್ದವರನ್ನು ಸಲಹಲು ಎರಡು ಲಕ್ಷ ಆಹಾರದ ಪ್ಯಾಕೆಟ್‌ಗಳನ್ನು ತೀರಪ್ರದೇಶಗಳಿಗೆ ತಲುಪಿಸುವಲ್ಲಿ ಮುಂಚೂಣಿ ಪಾತ್ರ ವಹಿಸಿದ್ದರು. ಪ್ರಸ್ತುತ ಇಂಟರ್‌ನ್ಯಾಷನಲ್ ಸೊಸೈಟಿ ಆಫ್ ನ್ಯೂಟ್ರಸುಟಿಕಲ್ಸ್ ಮತ್ತು ಇಂಡಿಯನ್ ಅಕಾಡೆಮಿ ಆಫ್ ನ್ಯೂಟ್ರಸುಟಿಕಲ್ಸ್ ಮತ್ತು ನ್ಯೂಟ್ರಿಷನಲ್ಸ್ ಸಂಸ್ಥೆಗಳ ಅಧ್ಯಕ್ಷರು. ಇವರ ಕೊಡುಗೆಯನ್ನು ಗುರುತಿಸಿದ ಕರ್ನಾಟಕ ಸರ್ಕಾರವು ಜೀವಮಾನ ಸಾಧನೆ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಭಾರತೀಯ ವಿಜ್ಞಾನಿಗಳಿಗೆ ನೀಡಲಾಗುವ ಅತ್ಯುನ್ನತ ಗೌರವ ಶಾಂತಿ ಸ್ವರೂಪ ಭಟ್ನಾಗರ್ ಬಹುಮಾನವು ಇವರಿಗೆ ಸಂದಿದೆ. ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿ (2004) ನೀಡಿ ಗೌರವಿಸಿದೆ.

## ರಾಮಕೃಷ್ಣ ವಿ. ಹೊಸೂರು

ಭಾರತದ ಜೀವಭೌತ ವಿಜ್ಞಾನಿಗಳಲ್ಲಿ ಒಬ್ಬರಾದ ರಾಮಕೃಷ್ಣ ವಿಜಯ ಹೊಸೂರು ಜನಿಸಿದ್ದು ಹೊಸೂರಿನಲ್ಲಿ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಭೌತ–ರಸಾಯನ